ಶ್ರೀ ಜಿ. ಹೆಚ್. ಪಟೇಲ್.—ಸರ್ಕಾರದ ಜವಾಬ್ದಾರಿ ಏನಿದೆ, ಅದನ್ನು ನಾವು ಸಂಪೂರ್ಣವಾಗಿ ನಿಭಾಯಿಸಿದ್ದೇವೆ ನಾವು ಎಷ್ಟು ದೂರ ಹೋಗಿ ಸಹಾಯ ಮಾಡಬಹುದೋ ಅಷ್ಟೆಲ್ಲಾ ಸಹಾಯ ಮಾಡಲು ಸಿದ್ದವಿದ್ದೇವೆ. ಆದರೆ ಅದರ ಮಾಲೀಕರು ಹಲವಾರು ಸಲ ಚರ್ಚೆಗೆ ಬಂದಾಗ ಯಾವುದೇ ಒಂದು ಇತ್ಯರ್ಥಕ್ಕೆ ಬರುತ್ತಿಲ್ಲ. ಈ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಬಿಟ್ಟು ಮತ್ತೆ ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇದು ನಿಮಗೂ ಗೊತ್ತಿದೆ, ಈಗ ಇದನ್ನು ಬಿ.ಐ.ಎಫ್.ಆರ್.ಗೆ ರೆಫರ್ ಮಾಡಿದ್ದೇವೆ. ಅವರು ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದರ ಪ್ರಕಾರ ಈ ಮಿಲ್ ಮಾಲೀಕರು ನಡೆದುಕೊಳ್ಳಬೇಕಾಗುತ್ತದೆ. ಆದರೆ ಇದನ್ನು ಸರ್ಕಾರವೇ ವಹಿಸಿಕೊಂಡು ನಡೆಸುವುದಕ್ಕಾಗುವುದಿಲ್ಲ.

ರಾಜ್ಯದಲ್ಲಿನ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನಿಲುಗಡೆ

೫೮೨. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ರಾಜ್ಯಾದ್ಯಂತ ನದಿಗಳ ದಂಡೆಗಂಟ ಇರುವ ಪಂಪುಸೆಟ್ಟುಗಳ ವಿದ್ಯುತ್ ಪೂರೈಕೆಯನ್ನು ಕಡಿಯುವ ನೀರಿನ ತೊಂದರೆ ಬರುವ ಕಾರಣದಿಂದ ಜನವರಿ ೩೧ ರಿಂದ ಪಂಪುಸೆಟ್ಟುಗಳ ವಿದ್ಯುತ್ ಸರಬರಾಜು ಮಾಡುವುದಾಗಿ ಘೋಷಿಸಿದ್ದು, ಇದು ಅನಿವಾರ್ಯವಾಗಿ ಇದ್ದರೂ ಸಹಿತ ವಿದ್ಯುತ್ ನಿಲುಗಡೆ ಮಾಡುವುದು ಸರಿಯೇ ;

ಆ) ಹಿಂಗಾರು ಮಳೆ ಚೆನ್ನಾಗಿ ಆಗಿರುವುದರಿಂದ ನದಿಗಳಲ್ಲಿ ಸತತವಾಗಿ ನೀರು ಹರಿಯುವ ಪ್ರದೇಶಗಳಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ರೂಪಿಸದಿದ್ದಂಥ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯ ನಿಲುಗಡೆ ಹಿಂದಕ್ಕೆ ಪಡೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಜಿ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು),—

ಅ) ಅನೇಕ ಗ್ರಾಮಗಳಿಂ ಮತ್ತು ನಗರಗಳಿಂ ಮತ್ತು ದೊಡ್ಡ ಪಟ್ಟಣಗಳೂ ಸಹ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯ ಮಟ್ಟದ ಸಣ್ಣ ನೀರಾವರಿ ಸಮನ್ವಯ ಸಮಿತಿಯ ಸಭೆಯಲ್ಲಿ, ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರವರಿಯಿಂದ ಜೂನ್ ಕೊನೆಯವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇಧಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳಿಂ ಮತ್ತು ನಗರಗಳಿಗೆ ಕುಡಿಯುವ ನೀರಿನ ಅಭಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸುತ್ತೋಲೆಯಲ್ಲಿ ಸೂಚನೆ ಕೊಡಲಾಯಿತು.

ಆ) ರೈತರಿಗೆ ಅನಾನುಕೂಲವಾಗುತ್ತದೆಂದು ಜನವಿಗಳು ಬಂದಿರುವುದರಿಂದ ಮತ್ತು ಕುಡಿಯುವ ನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿ ದಂಡೆಗಳ ಮೇಲಿನ ನೀರಾವರಿ ಪಂಪು ಸೆಟ್ಟುಗಳಿಗೆ ೧೯೮೮ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.

(ಪ್ರಶ್ನೆ ೮೬ (೭೫೯) ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ)

ತುಂಗಭದ್ರಾ ಫೈಬರ್ಸ್ ಕಾರ್ಖಾನೆ ಬಗ್ಗೆ ವಿಜಯನಗರ

೫೮೯. ಶ್ರೀ ಯು. ಭೂಪತಿ (ಸಂಡೂರು) —ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಫೈಬರ್ಸ್ ಕಾರ್ಖಾನೆಯಿಂ ಉತ್ಪಾದನೆಯನ್ನು ನಡಿಸುತ್ತಿದೆಯೇ ;